KACM200001252015

# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕಡೂರು

ಉಪಸ್ಥಿತರು ಃ- ಶ್ರೀಮತಿ ಸುಜಾತಾ ಸುವರ್ಣಾ ಬಿ. ಬಿ.ಕಾಂ,ಎಲ್‌ಎಲ್‌ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಕಡೂರು

**ಓ.ಎಸ್.ನಂ.೫೫/೨೦೧೫**

ದಿನಾಂಕ: ೨೭-೦೯-೨೦೨೧

ವಾದಿ ಃ- ೧. ಹನುಮಂತಪ್ಪ ,
ತಂದೆ ಲೇ: ತಿಮ್ಮಪ್ಪ,
೬೦ ವರ್ಷ ವಯಸ್ಸು,
ವ್ಯವಸಾಯ,

೨. ಸಣ್ಣಗೋವಿಂದಪ್ಪ,
ಬಿನ್: ಲೇ: ತಿಮ್ಮಪ್ಪ
೪೮ ವರ್ಷ ವಯಸ್ಸು,
ವ್ಯವಸಾಸಯ.

ಇಬ್ಬರ ವಾಸಃ ಹುಲ್ಲೇಹಳ್ಳಿ ಗ್ರಾಮ,
ಬೀರೂರು ಅಂಚೆ,
ಬೀರೂರು ಹೋಬಳಿ,
ಕಡೂರು ತಾಲ್ಲೂಕು,

ಚಿಕ್ಕಮಗಳೂರು ಜಿಲ್ಲೆ
(ವಾದಿಯ ಪರವಾಗಿ ಶ್ರೀ. ಎಂ. ಬಸವರಾಜಪ್ಪ - ವಕೀಲರು)

-ವಿರುದ್ಧ-

ಪ್ರತಿವಾದಿಯರು ಃ-೧. ಓಬಳಪ್ಪ ತಂದೆ ಲೇ: ಸತ್ತಪ್ಪ,
೮೦ ವರ್ಷ ವಯಸ್ಸು,
ವ್ಯವಸಾಯ,

೨. ತಿಮ್ಮಮ್ಮ ಕೊಂ: ಲೇ: ಸಗುನಪ್ಪ,
೭೫ ವರ್ಷ ವಯಸ್ಸು,
ಗೃಹಿಣಿ,

೩. ಸಗುನಿ ರಂಗಪ್ಪ, ಬಿನ್: ಲೇ: ಸಗುನಪ್ಪ,
೪೮ ವರ್ಷ ವಯಸ್ಸು,

೪. ರತ್ನಮ್ಮ ಬಿನ್: ಸಗುನಪ್ಪ,
೪೫ ವರ್ಷ ವಯಸ್ಸು,

೫. ಸಾಕಮ್ಮ ಬಿನ್: ಸಗುನಪ್ಪ,
೩೫ ವರ್ಷ ವಯಸ್ಸು,

೬. ಗೋವಿಂದಪ್ಪ ಬಿನ್: ಲೇ: ಸತ್ತಪ್ಪ,
೭೦ ವರ್ಷ ವಯಸ್ಸು,
ವ್ಯವಸಾಯ,
ಮೃತರ ಪರವಾಗಿ

ಎ. ಶ್ರೀಮತಿಃ ತಿಮಮ್ಮ,
ಕೊಂ: ಲೇ: ಗೋವಿಂದಪ್ಪ,
೬೮ ವರ್ಷ ವಯಸ್ಸು,

ಬಿ. ಕುಮಾರಪ್ಪ ಬಿನ್: ಲೇ : ಗೋವಿಂದಪ್ಪ,
೫೦ ವರ್ಷ ವಯಸ್ಸು,

ಸಿ. ನರಸಿಂಹಪ್ಪ ಬಿನ್: ಲೇ : ಗೋವಿಂದಪ್ಪ,
೩೫ ವರ್ಷ ವಯಸ್ಸು,

ಡಿ. ವೆಂಕಟೇಶ ಬಿನ್: ಲೇ : ಗೋವಿಂದಪ್ಪ,
೩೨ ವರ್ಷ ವಯಸ್ಸು,

(ಎ) ಇಂದ (ಡಿ) ರವರ ವಾಸ ಹುಲ್ಲೆಹಳ್ಳಿ ಗ್ರಾಮ,
ಬೀರೂರು ಹೋಬಳಿ,
ಕಡೂರು ತಾಲ್ಲೂಕು.

ಎಲ್ಲರ ವಾಸ : ಹುಲ್ಲೆಹಳ್ಳಿ ಗ್ರಾಮ,
ಬೀರೂರು ಅಂಚೆ ಮತ್ತು ಹೋಬಳಿ,
ಕಡೂರು ತಾಲ್ಲೂಕು.

೭. ಶ್ರೀಮತಿಃ ಜಯಮ್ಮ,
ಕೊಂ: ರಾಜಪ್ಪ ,
ಬಿನ್: ಲೇ: ತಿಮ್ಮಪ್ಪ,
೫೫ ವರ್ಷ ವಯಸ್ಸು,
ಗೃಹಿಣಿ,
ವಾಸಃ ಎಮ್ಮೆದೊಡ್ಡಿ – ರಂಗೇನಹಳ್ಳಿ ಗ್ರಾಮ,
ಬೀರೂರು ಅಂಚೆ,
ಬೀರೂರು ಹೋಬಳಿ,
ಕಡೂರು ತಾಲ್ಲೂಕು.

(ಪ್ರತಿವಾದಿ ೧ ರ ಪರ ಹೆಚ್.ಎನ್.ಎಸ್. ವಕೀಲರು)
(ಪ್ರತಿವಾದಿ ೨, ೩ ಮತ್ತು ೬ ರ ಪರ ಬಿ.ಆರ್. ವಕೀಲರು)
(ಪ್ರತಿವಾದಿ ೪ ಮತ್ತು ೫ ರವರು ಗೈರುಹಾಜರು)
(ಪ್ರತಿವಾದಿ ೬(ಎ ಇಂದ ಡಿ) ಪರ ಕೆ.ಎಸ್.ಆರ್. ವಕೀಲರು)

(ಪ್ರತಿವಾದಿ ೭ ರ ಪರ ಕೆ.ಆರ್.ಎಸ್. ವಕೀಲರು)

ಮಧ್ಯಂತರ ಅರ್ಜಿ ೧ಅ ರಲ್ಲಿನ ಪಕ್ಷಕಾರರು

ಅರ್ಜಿದಾರರು : ಹನುಮಂತಪ್ಪ ಮತ್ತು ಇತರರು

:: ವಿರುದ್ಧ ::

ಎದುರುದಾರರು: ಕುಮಾರಪ್ಪ ಮತ್ತು ನರಸಿಂಹಪ್ಪ

## ಮಧ್ಯಂತರ ಅರ್ಜಿ ೧ಅ ರ ಮೇಲೆ ಆದೇಶ

ವಾದಿಯರು ಈ ದಾವೆಯಲ್ಲಿ ಮಧ್ಯಂತರ ಅರ್ಜಿ ೧ಅನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ ೩೯ ನಿಯಮ ೧ ಮತ್ತು ೨ ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಅರ್ಜಿಯಲ್ಲಿ ತೋರಿಸಿದಂತಹ ಶೆಡ್ಯೂಲ್ ಸ್ವತ್ತುಗಳಲ್ಲಿ ಪ್ರತಿವಾದಿಯಾಗಲೀ, ಅವರ ಏಜೆಂಟರಾಗಲೀ, ಕೆಲಸಗಾರರಾಗಲೀ, ಅವರ ಪರ ಕೆಲಸ ಮಾಡುವ ಯಾವುದೇ ವ್ಯಕ್ತಿಯಾಗಲಿ ಯಾವುದೇ ಕಟ್ಟಡವನ್ನು ಕಟ್ಟದಂತೆ ಆದೇಶ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

ಅರ್ಜಿಯಲ್ಲಿನ ಶೆಡ್ಯೂಲ್ ಸ್ವತ್ತುಗಳು:-

೧. ಕಡೂರು ತಾಲ್ಲೂಕು, ಹುಲ್ಲೇನಹಳ್ಳಿ ಗ್ರಾಮದಲ್ಲಿನ ಹುಲ್ಲೇನಹಳ್ಳಿ ಗ್ರಾಮ ಪಂಚಾಯ್ತಿ ಅಸೆಸ್‌ಮೆಂಟ್ ನಂ: ೪೧೩ ರ ವಿಸ್ತೀರ್ಣ ಪೂರ್ವ ಪಶ್ಚಿಮ ೧೦೦ ಅಡಿಗಳು ಮತ್ತು ದಕ್ಷಿಣೋತ್ತರ ೪೫ ಅಡಿಗಳ ಸ್ವತ್ತಿಗೆ ಚಕ್ಕುಬಂಧಿ: ಪೂರ್ವಕ್ಕೆ: ರುದ್ರಮ್ಮ ಗೋವಿಂದಪ್ಪರವರ ಆಸ್ತಿ, ಪಶ್ಚಿಮಕ್ಕೆ: ಕುಮಾರಪ್ಪರವರ ಆಸ್ತಿ, ಉತ್ತರಕ್ಕೆ: ಗೋವಿಂದಪ್ಪ / ಕರಿಯಪ್ಪರವರ ಆಸ್ತಿ ಮತ್ತು ದಕ್ಷಿಣಕ್ಕೆ: ಬೀರೂರು - ಹುಲ್ಲೇನಹಳ್ಳಿ ರಸ್ತೆ.

೨. ಕಡೂರು ತಾಲ್ಲೂಕು, ಹುಲ್ಲೇನಹಳ್ಳಿ ಗ್ರಾಮದಲ್ಲಿನ ಹುಲ್ಲೇನಹಳ್ಳಿ ಗ್ರಾಮ ಪಂಚಾಯ್ತಿ ಅಸೆಸ್‌ಮೆಂಟ್ ನಂ: ೪೧೨ ರ ವಿಸ್ತೀರ್ಣ ಪೂರ್ವ ಪಶ್ಚಿಮ ೮೨ ಅಡಿಗಳು ಮತ್ತು ದಕ್ಷಿಣೋತ್ತರ ೬೦ ಅಡಿಗಳ ಸ್ವತ್ತಿಗೆ ಚಕ್ಕುಬಂಧಿ: ಪೂರ್ವಕ್ಕೆ: ನರಸಿಂಹಪ್ಪ / ಗೋವಿಂದಪ್ಪ ರವರ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಓಬಳಪ್ಪ / ನಂಜಪ್ಪ ರವರ ಆಸ್ತಿ ಮತ್ತು ದಕ್ಷಿಣಕ್ಕೆ: ಬೀರೂರು - ಹುಲ್ಲೇನಹಳ್ಳಿ ರಸ್ತೆ.

೨. ಅರ್ಜಿದಾರರು ಮಧ್ಯಂತರ ಅರ್ಜಿ ೧ಕ್ಕೆ ಪೂರಕವಾಗಿ ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಆ ಪ್ರಮಾಣ ಪತ್ರದ ಸಾರಾಂಶ ಈ ಕೆಳಗಿನಂತಿದೆ:-

ವಾದಿಯು ಪ್ರತಿವಾದಿಯವರ ವಿರುದ್ದ ದಾವಾ ಆಸ್ತಿಯಲ್ಲಿ ಪಾಲು ಬೇಕೆಂದು ಕೋರಿಕೊಂಡಿದ್ದು ಅವರು ದಾವಾ ಆಸ್ತಿಯನ್ನು ಜಂಟಿಯಾಗಿ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬಂದಿರುತ್ತಾರೆ. ದಾವಾ ಆಸ್ತಿಗಳ ಮೇಲೆ ಯಾರಿಗೂ ಸಹ ಪ್ರತ್ಯೇಕವಾದ ಹಕ್ಕು ಅಥವಾ ಹಿತಾಸಕ್ತಿ ಇದ್ದಿರುವುದಿಲ್ಲ. ಹೀಗೆ ಇರುವಾಗ ಪ್ರತಿವಾದಿಯವರಾದ ನರಸಿಂಹಪ್ಪ ಮತ್ತು

ಕುಮಾರಪ್ಪರವರು ವಾದಿಯ ಹಕ್ಕನ್ನು ಕಸಿದುಕೊಳ್ಳಲು ಮತ್ತು ವಂಚಿಸಲು ಹಾಗೂ ದುರ್ಲಾಭ ಪಡೆದುಕೊಳ್ಳಲು ಅವರಿಗೆ ಅರ್ಜಿಯ ಆಸ್ತಿಯಲ್ಲಿ ಯಾವುದೇ ಪ್ರತ್ಯೇಕ ಹಕ್ಕು ಇಲ್ಲದಿದ್ದರು ಕೂಡ ಕಾನೂನು ಬಾಹಿರವಾಗಿ ಅರ್ಜಿಯ ಆಸ್ತಿಯಲ್ಲಿ ಕಟ್ಟಡವನ್ನು ಕಟ್ಟುತ್ತಿದ್ದಾರೆ.

ವಾದಿಯರು, ನರಸಿಂಹಪ್ಪ ಮತ್ತು ಕುಮಾರಪ್ಪರವರಲ್ಲಿ ದಾವಾ ಆಸ್ತಿಗಳಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದೆಂದು ಹಾಗೂ ಅರ್ಜಿಯ ಆಸ್ತಿಯ ಸ್ವರೂಪವನ್ನು ಬದಲಾಯಿಸಬಾರದೆಂದು ಕೇಳಿಕೊಂಡಿರುತ್ತಾರೆ, ಆದರೆ ಅವರು ವಾದಿಯ ಮಾತನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ ಹಾಗೂ ಅವರಿಗೆ ಬೈದು ಹೆದರಿಸಿ ಸಾರ್ವಜನಿಕರ ಎದುರಲ್ಲಿ ಅವಮಾನ ಮಾಡಿರುತ್ತಾರೆ. ಅವರ ಈ ಚಟುವಟಿಕೆಯು ಕಾನೂನು ಬಾಹಿರವಾಗಿದೆ. ಆದುದರಿಂದ ಅವರಿಗೆ ಆ ಅರ್ಜಿಯ ಆಸ್ತಿಯಲ್ಲಿ ನರಸಿಂಹಮೂರ್ತಿ ಮತ್ತು ಕುಮಾರಪ್ಪರವರ ಏಜೆಂಟ್ ಕೆಲಸಗಾರರು, ಕುಟುಂಬದ ಸದಸ್ಯರು ಹಾಗೂ ಅವರ ಪರ ಕೆಲಸ ಮಾಡುವ ಯಾವುದೇ ವ್ಯಕ್ತಿಯು ಮನೆಯನ್ನಾಗಲೀ ಕಟ್ಟಡವನ್ನಾಗಲೀ ಈ ದಾವೆ ಮುಗಿಯುವವರೆಗೆ ಕಟ್ಟಬಾರದೆಂದು ತಾತ್ಕಾಲಿಕ ನಿರ್ಬಂದಕಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

೩. ಪ್ರತಿವಾದಿಯು ತಮ್ಮ ತಕರಾರನ್ನು ಸಲ್ಲಿಸಿದ್ದು ತಕರಾರಿನ ಸಾರಾಂಶ ಈ ಕೆಳಗಿನಂತೆ ಇರುತ್ತದೆ:-

ವಾದಿ ಸಲ್ಲಿಸಿದ ಅರ್ಜಿಯು ಕಾನೂನಿನಡಿಯಲ್ಲಾಗಲೀ, ವಸ್ತು ಸ್ಥಿತಿಯಲ್ಲಾಗಲೀ ಊರ್ಜಿವಾಗಿರುವುದಿಲ್ಲ ಮತ್ತು ಅರ್ಜಿಯು ವಜಾವಾಗಲು ಯೋಗ್ಯವಾಗಿರುತ್ತದೆ. ಅರ್ಜಿದಾರರು ಸತ್ಯಾಂಶವನ್ನು ಮರೆಮಾಚಿ ಸುಳ್ಳು

ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಈ ದಾವೆಯು ಪ್ರತಿವಾದಿಯವರ ಸಾಕ್ಷ್ಯಕ್ಕೆ ಮುಂದೂಡಿದ್ದು ವಾದಿಯವರ ವಿಚಾರಣೆ ಮುಗಿದಿದ್ದು ಈ ಸಮಯದಲ್ಲಿ ಕೇವಲ ಕಾನೂನನ್ನು ದುರ್ಬಳಕೆ ಮಾಡಿಕೊಳ್ಳುವ ಸಲುವಾಗಿ ಅರ್ಜಿಯನ್ನು ಸಲ್ಲಿಸಿದ್ದಾಗಿರುತ್ತದೆ.

ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಯಾವುದೇ ಕಟ್ಟಡವನ್ನು ಕಟ್ಟಿರುವುದಿಲ್ಲ, ಅರ್ಜಿಯಲ್ಲಿ ತೋರಿಸಿರುವಂತಹ ಆಸ್ತಿಗಳು ದಾವಾ ಸ್ವತ್ತುಗಳಾಗಿರುವುದಿಲ್ಲ, ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳಲ್ಲಿ ಕಟ್ಟಡವನ್ನು ಕಟ್ಟದಂತೆ ಆದೇಶವನ್ನು ಮಾಡಲು ಬರುವುದಿಲ್ಲ. ಅರ್ಜಿದಾರರು ಅರ್ಜಿ ಆಸ್ತಿಯು ದಾವಾ ಆಸ್ತಿಗೆ ಸಂಬಂಧ ಹೇಗೆ ಎಂದು ತೋರಿಸಲು ಯಾವ ದಾಖಲಾತಿಗಳನ್ನು ಹಾಜರುಪಡಿಸಿಲ್ಲ, ನಿರ್ಭಂದಕಾಜ್ಞೆ ದಾವೆಯಲ್ಲಿ ದಾವಾ ಸ್ವತ್ತನು ಹೊರತುಪಡಿಸಿ ಬೇರೆ ಸ್ವತ್ತುಗಳಿಗೆ ನಿರ್ಭಂದಕಾಜ್ಞೆ ನೀಡಲು ಕಾನೂನಿನಡಿಯಲ್ಲಿ ಯಾವುದೇ ಅವಕಾಶ ಇರುವುದಿಲ್ಲ. ವಾದಿಯು ಹಾಜರುಪಡಿಸಿದಂತಹ ದಾಖಲಾತಿಗಳು ಅರ್ಜಿಯಲ್ಲಿನ ಆಸ್ತಿಗಳಿಗೆ ಸಂಬಂದಪಟ್ಟಿರುವುದಿಲ್ಲ ಹಾಗೂ ಆ ಆಸ್ತಿಯ ಈಗಿನ ಮಾಲೀಕರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

ಪ್ರತಿವಾದಿಯರು ಸಂಬಂಧ ಪಟ್ಟ ಪ್ರಾಧೀಕಾರದ ಸಮಕ್ಷಮ ಮನೆಯನ್ನು ಕಟ್ಟಲು ಬಸವ ಯೋಜನೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಅವರು ತುಂಬಾ ಬಡವರಾಗಿದ್ದು ಅವರಿಗೆ ಜೀವನ ಮಾಡಲು ಯಾವುದೇ ಮನೆ ಇರುವುದಿಲ್ಲ. ಅವರ ಅರ್ಜಿಯನ್ನು ಪರಿಗಣಿಸಿ ಅವರಿಗೆ ಪ್ರಾಧೀಕಾರವು ಮನೆಯನ್ನು ಕಟ್ಟಲು ಹಣವನ್ನು ಬಿಡುಗಡೆ ಮಾಡಿರುತ್ತದೆ.

ನಂತರ ಅವರು ಕಡೂರು ಗ್ರಾಮ ಪಂಚಾಯ್ತಿಯ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯವರಿಗೆ ನಿವೇಶನವನ್ನು ಅಡಮಾನ ಮಾಡಿರುತ್ತಾರೆ. ತದನಂತರ ಹಣ ಬಿಡುಗಡೆ ಆಗಿರುತ್ತದೆ. ಸರ್ಕಾರದ ಹಣದಿಂದ ಮನೆ ಕಟ್ಟುವ ವಿಚಾರ ಗೊತ್ತಿದ್ದು ಅವರು ಕೇವಲ ಪ್ರತಿವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಲಾಗಿದೆ.

ವಾದಿಯು ಈ ದಾವೆಯನ್ನು ದಾವಾ ಆಸ್ತಿಗಳಲ್ಲಿ ಪಾಲು ಕೇಳಿ ಸಲ್ಲಿಸಿದ್ದಾಗಿರುತ್ತದೆ. ಮನೆ ಕಟ್ಟುವುದರಿಂದ ವಾದಿಯವರಿಗೆ ಯಾವುದೇ ತೊಂದರೆ ಆಗುವುದಿಲ್ಲ ಆದರೆ ಮನೆ ಕಟ್ಟುವುದನ್ನು ನಿಲ್ಲಿಸಿದಲ್ಲಿ ಪ್ರತಿವಾದಿಯವರಿಗೆ ತುಂಬಾ ತೊಂದರೆಯಾಗುತ್ತದೆ ಹಾಗೂ ಹಾಕಿರುವ ಬಂಡವಾಳ ನಷ್ಟವಾಗುತ್ತದೆ. ಈಗಾಗಲೇ ಇಟ್ಟಿಗೆಯಿಂದ ಗೋಡೆ ನಿರ್ಮಾಣ ಮಾಡಿದ್ದು ಮನೆ ಕಟ್ಟುವುದನ್ನು ನಿಲ್ಲಿಸಿದಲ್ಲಿ ಸರ್ಕಾರದಿಂದ ಮಂಜೂರಾದ ಹಣದ ಪ್ರಯೋಜನವಾಗುವುದಿಲ್ಲ ಇದರಿರದಾಗಿ ಪ್ರತಿವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ವಾದಿಯು ಈ ದಾವೆಯನ್ನು ವಿಭಜನೆ ಸಲುವಾಗಿ ಸಲ್ಲಿಸಿದ್ದು ಕೇವಲ ದಾವೆ ಮುಗಿಯುವವರೆಗೆ ಆಸ್ತಿಗಳನ್ನು ಮಾರಾಟ ಮಾಡಬಾರದೆಂದು ಮತ್ತು ಅಡಮಾನ ಮಾಡಬಾರದೆಂದು ಮಾತ್ರ ಆದೇಶ ಮಾಡಬಹುದೇ ಹೊರತು ಕಟ್ಟಡ ಕಟ್ಟಬಾರದೆಂದು ಆದೇಶ ಮಾಡುವ ಉಪಭಂದ ಕಾನೂನಿನಡಿಯಲ್ಲಿ ಇದ್ದಿರುವುದಿಲ್ಲ.

ಈಗಾಗಲೇ ಬಸವ ವಸತಿ ಯೋಜನೆಯಡಿಯಲ್ಲಿ ಮನೆಯು ಸಂಪೂರ್ಣಗೊಂಡಿದ್ದು ಕೇವಲ ಮೇಲ್ಚಾವಣಿ ಕೆಲಸ ಮಾತ್ರ ಬಾಕಿ ಇದ್ದು

ಪ್ರತಿವಾದಿಯು ಸರ್ಕಾರದ ಹಣವನ್ನು ಸಹ ಪಡೆದಿರುತ್ತಾರೆ. ಆದುದರಿಂದ ಈ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

೪. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

ನ್ಯಾಯಾಲಯವು ನಿರ್ಧರಿಸಬೇಕಾದ ಅಂಶಗಳು ಈ ಕೆಳಗಿನಂತಿವೆ:

೧) ಸದರಿ ವಾದಿಯರು ಮೇಲ್ನೋಟಕ್ಕೆ ಸಮ್ಮತವಾದ ದಾವೆಯನ್ನು ಹೊಂದಿರುತ್ತಾರೆ ಎಂಬುದನ್ನು ರುಜುವಾತುಪಡಿಸುವರೇ?

೨) ಮಧ್ಯಂತರ ಅರ್ಜಿಯಲ್ಲಿ ಕೋರಿದಂತೆ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡದಿದ್ದಲ್ಲಿ ಅನಾನುಕೂಲತೆ ಒಲವು ತಮ್ಮ ಪರವಾಗಿ ಇರುತ್ತದೆ ಎಂಬುದನ್ನು ವಾದಿಯರು ರುಜುವಾತುಪಡಿಸುವರೇ?

೩) ಒಂದು ವೇಳೆ ತಾತ್ಕಾಲಿಕ ನಿರ್ಭಂಧಕಾಜ್ಞೆ ಆದೇಶ ನೀಡದೇ ಇದ್ದಲ್ಲಿ ತುಂಬಲಾರದ ನಷ್ಟ ಉಂಟಾಗುವ ಸಂಭವ ಇರುತ್ತದೆ ಎಂಬುದನ್ನು ವಾದಿಯರು ರುಜುವಾತುಪಡಿಸುವರೇ?

೪) ಆದೇಶವೇನು?

೫. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

೬. ಸದರಿ ನ್ಯಾಯಾಲಯದ ಮುಂದಿರುವ ದಾವಾಂಶಗಳನ್ನು ಹಾಗೂ ದಾಖಲೆಗಳನ್ನು ಹಾಗೂ ಉಭಯ ವಕೀಲರ ವಾದವನ್ನು ಆಲಿಸಿ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರ.

ಅಂಶ ನಂ. ೧ಃ ನಕಾರಾತ್ಮಕವಾಗಿ

ಅಂಶ ನಂ. ೨ಃ ನಕಾರಾತ್ಮಕವಾಗಿ

ಅಂಶ ನಂ. ೩ಃ ನಕಾರಾತ್ಮಕವಾಗಿ

ಅಂಶ ನಂ. ೪ಃ ಅಂತಿಮ ಆದೇಶದಂತೆ, ಈ ಕೆಳಕಂಡ ಕಾರಣಗಳಿಗಾಗಿಃ-

## ಕಾ ರ ಣ ಗ ಳು

೭. ಅಂಶ ನಂ.೧ ರಿಂದ ೩ಃ ಈ ಎಲ್ಲಾ ಅಂಶಗಳು ಒಂದಕ್ಕೊಂದು ಅಂತರ್ಗತವಾಗಿದ್ದು ಸಂದರ್ಭ ಮತ್ತು ಸನ್ನಿವೇಶಗಳನ್ನು ಪುನರಾವರ್ತನೆ ಯಾಗುವುದನ್ನು ತಪ್ಪಿಸುವ ಸಲುವಾಗಿ ಒಟ್ಟಿಗೆ ಪರಿಗಣಿಸಲಾಯಿತು.

ವಾದಿಯು ಪ್ರತಿವಾದಿಯರ ವಿರುದ್ಧ ದಾವಾಸ್ತಿಯಲ್ಲಿ ತನಗೆ ೧:೫ ಹಿಸ್ಸೆ ಇದೆಯೆಂದು ದಾವೆಯನ್ನು ಹೂಡಿರುತ್ತಾರೆ. ವಾದಿಯರು ದಾವಾ ಆಸ್ತಿಗಳ ಮೇಲೆ ಯಾರೂ ಸಹ ಪ್ರತ್ಯೇಕವಾದ ಹಕ್ಕು ಅಥವಾ ಹಿತಾಸಕ್ತಿಯನ್ನು ಪಡೆದಿರುವುದಿಲ್ಲವೆಂದು ಪ್ರತಿವಾದಿಯವರಾದ ನರಸಿಂಹಪ್ಪ ಮತ್ತು ಕುಮಾರಪ್ಪರವರು ವಾದಿಯ ಹಕ್ಕನ್ನು ಕಸಿದುಕೊಳ್ಳಲು ಮತ್ತು ವಂಚಿಸಲು ಹಾಗೂ ದುರ್ಲಾಭ ಪಡೆದುಕೊಳ್ಳಲು ಅವರಿಗೆ ಅರ್ಜಿಯ ಆಸ್ತಿಯಲ್ಲಿ ಯಾವುದೇ ಪ್ರತ್ಯೇಕ ಹಕ್ಕು ಇಲ್ಲದಿದ್ದರು ಕೂಡ ಕಾನೂನು ಬಾಹಿರವಾಗಿ ಅರ್ಜಿಯ ಆಸ್ತಿಯಲ್ಲಿ ಕಟ್ಟಡವನ್ನು ಕಟ್ಟುತ್ತಿದ್ದಾರೆಂದು ಅವರು, ನರಸಿಂಹಪ್ಪ ಮತ್ತು ಕುಮಾರಪ್ಪರವರಲ್ಲಿ ದಾವಾ ಆಸ್ತಿಗಳಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದೆಂದು ಕೇಳಿಕೊಂಡರು ಹಾಗೂ ಅರ್ಜಿಯ ಆಸ್ತಿಯ ಸ್ವರೂಪವನ್ನು ಬದಲಾಯಿಸಬಾರದೆಂದು

ಕೇಳಿಕೊಂಡಿರುತ್ತಾರೆ ಆದರೆ ಅವರು ಅದನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ ಹಾಗೂ ಅವರಿಗೆ ಬೈದು ಹೆದರಿಸಿ ಸಾರ್ವಜನಿಕರ ಎದುರಲ್ಲಿ ಅವಮಾನ ಮಾಡಿರುತ್ತಾರೆಂದು ಅವರ ಈ ಚಟುವಟಿಕೆಯು ಕಾನೂನು ಬಾಹಿರವಾಗಿದೆ ಆದುದರಿಂದ ಅವರಿಗೆ ಆ ಅರ್ಜಿಯ ಆಸ್ತಿಯಲ್ಲಿ ನರಸಿಂಹಮೂರ್ತಿ ಮತ್ತು ಕುಮಾರಪ್ಪರವರ ಏಜೆಂಟ್ ಕೆಲಸಗಾರರು, ಕುಟುಂಬದ ಸದಸ್ಯರು ಹಾಗೂ ಅವರ ಪರ ಕೆಲಸ ಮಾಡುವ ಯಾವುದೇ ವ್ಯಕ್ತಿಯು ಮನೆಯನ್ನಾಗಲೀ ಕಟ್ಟಡವನ್ನಾಗಲೀ ಈ ದಾವೆ ಮುಗಿಯುವವರೆಗೆ ಕಟ್ಟಬಾರದೆಂದು ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

೮. ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ದಾವಾ ಆಸ್ತಿಯಲ್ಲಿ ಯಾವುದೇ ಕಟ್ಟಡವನ್ನು ಕಟ್ಟಿರುವುದಿಲ್ಲವೆಂದು ಅರ್ಜಿಯಲ್ಲಿ ತೋರಿಸಿರುವಂತಹ ಆಸ್ತಿಗಳು ದಾವಾ ಸ್ವತ್ತುಗಳಾಗಿರುವುದಿಲ್ಲ, ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳಲ್ಲಿ ಕಟ್ಟಡವನ್ನು ಕಟ್ಟದಂತೆ ಆದೇಶವನ್ನು ಮಾಡಲು ಬರುವುದಿಲ್ಲ, ಅರ್ಜಿದಾರರು ಅರ್ಜಿ ಆಸ್ತಿಯು ದಾವಾ ಆಸ್ತಿಗೆ ಸಂಬಂಧ ಹೇಗೆ ಎಂದು ತೋರಿಸಲು ಯಾವ ದಾಖಲಾತಿಗಳನ್ನು ಹಾಜರುಪಡಿಸಿಲ್ಲ, ನಿರ್ಭಂದಕಾಜ್ಞೆ ದಾವೆಯಲ್ಲಿ ದಾವಾ ಸ್ವತ್ತನ್ನು ಹೊರತುಪಡಿಸಿ ಬೇರೆ ಸ್ವತ್ತುಗಳಿಗೆ ನಿರ್ಭಂದಕಾಜ್ಞೆ ನೀಡಲು ಕಾನೂನಿನಡಿಯಲ್ಲಿ ಯಾವುದೇ ಅವಕಾಶ ಇರುವುದಿಲ್ಲವೆಂದು ಖಂಡನೆಯನ್ನು ತೆಗೆದುಕೊಂಡಿರುತ್ತಾರೆ.

೯. ವಾದಿಯು ತಮ್ಮ ವಾದಪತ್ರದಲ್ಲಿ ದಾವಾ ಆಸ್ತಿಗಳನ್ನು ಸರ್ವೆ ನಂ. ೧೭೭ ರ ವಿಸ್ತೀರ್ಣ ೧ ಎಕರೆ ೧೮ ಗುಂಟೆ, ಸರ್ವೆ ನಂ. ೯/೪ ರ ವಿಸ್ತೀರ್ಣ ೧ ಎಕರೆ ೩೧ ಗುಂಟೆ, ಸರ್ವೆ ನಂ. ೯/೭ ರ ವಿಸ್ತೀರ್ಣ ೨ ಎಕರೆ ೨೮

ಗುಂಟೆ, ಸರ್ವೆ ನಂ. ೧೭/೧ ರ ವಿಸ್ತೀರ್ಣ ೪ ಎಕರೆ ೧ ಗುಂಟೆ, ಸರ್ವೆ ನಂ. ೧೬೨/೧ ರ ವಿಸ್ತೀರ್ಣ ૩ ಎಕರೆ ૩ ಗುಂಟೆ, ಸರ್ವೆ ನಂ. ೪/೨೫ ರ ವಿಸ್ತೀರ್ಣ ೪ ಎಕರೆ, ಸರ್ವೆ ನಂ. ೪/೨೦ ರ ವಿಸ್ತೀರ್ಣ ೪ ಎಕರೆ, ಸರ್ವೆ ನಂ. ೬/೫ ರ ವಿಸ್ತೀರ್ಣ ೨ ಎಕರೆ ೨ ಗುಂಟೆ, ಸರ್ವೆ ನಂ. ೧೫೨/೨ಪಿ೧ ರ ವಿಸ್ತೀರ್ಣ ೧ ಎಕರೆ ೨೦ ಗುಂಟೆ, ಸರ್ವೆ ನಂ. ೧೬೩/ಪಿ ರ ವಿಸ್ತೀರ್ಣ ೫ ಎಕರೆ ೨೬ ಗುಂಟೆ ಎಂದು ನಮೂದು ಮಾಡಿರುವುದು ಕಂಡುಬರುತ್ತದೆ. ಎಲ್ಲಿಯೂ ಕೂಡ ಅರ್ಜಿಯಲ್ಲಿ ತೋರಿಸಿದಂತಹ ಆಸ್ತಿಗಳು ದಾವಾ ಶೆಡ್ಯೂಲ್‌ನಲ್ಲಿರುವ ಆಸ್ತಿಗಳಾಗಿರುವುದಿಲ್ಲ ಹಾಗೂ ವಾದಿಯು ಖಾತ ರೆಜಿಸ್ಟಾರ್ ಹಾಜರು ಪಡಿಸಿದ್ದು ಆ ಎರಡು ಖಾತ ರೆಜಿಸ್ಟರ್‌ಗಳು ಆಸ್ತಿ ಸಂಖ್ಯೆ : ೪೧೩ ಆಗಿದ್ದು ಆ ದಾಖಲಾತಿಯಲ್ಲಿ ನರಸಿಂಹಪ್ಪ ಎಂಬ ಹೆಸರು ಇದ್ದು ಹಾಗೂ ೪೧೨ ಕುಮಾರಪ್ಪ ಬಿನ್ ಗೊವಿಂದಪ್ಪ ಎಂಬ ಹೆಸರು ಇರುವುದು ಕಂಡು ಬರುತ್ತದೆ ಹಾಗೂ ಫೋಟೋಗಳಲ್ಲಿ ಮನೆಯನ್ನು ಕಟ್ಟುತ್ತಿರುವುದು ಕಂಡು ಬರುತ್ತದೆ.

೧೦. ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ ૩೯ ನಿಯಮ ೧:

ತಾತ್ಕಾಲಿಕ ನಿರ್ಬಂಧಕಾಜ್ಞೆಗಳು ಮತ್ತು ವಾದಕಾಲೀನ ಆದೇಶಗಳು:

ತಾತ್ಕಾಲಿಕ ನಿರ್ಬಂಧಕಾಜ್ಞೆಗಳು:

೧. ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಯಾವ ಸಂದರ್ಭಗಳಲ್ಲಿ ಮಾಡಬಹುದು: ಯಾವುದೇ ದಾವೆಯಲ್ಲಿ ಶಪಥ ಪತ್ರದ ಮೂಲಕ ಅಥವಾ ಅನ್ಯಥಾ:

ಎ) ದಾವೆಯಲ್ಲಿ ವಿವಾದದಲ್ಲಿರುವ ಯಾವುದೇ ಸ್ವತ್ತು ದಾವೆಯ ಯವನೇ ಪಕ್ಷಕಾರನಿಂದ ಪೋಲಾಗುವ ಹಾನಿಗೊಳಗಾಗುವ ಅಥವಾ

ಪರಭಾರೆಯಾಗುವ, ಅಥವಾ ಡಿಕ್ರಿಯ ಅಮಲ್ಜಾರಿಯಲ್ಲಿ ಅಕ್ರಮವಾಗಿ ಮಾರಾಟವಾಗುವ ಅಪಾಯವಿದೆಯೆಂದು: ಅಥವಾ

ಬಿ) ಪ್ರತಿವಾದಿಯು ತನ್ನ ಸಾಲಿಗರಿಗೆ ಮೋಸ ಮಾಡುವ ದೃಷಿಯಿಂದ ತನ್ನ ಸ್ವತ್ತನು ಸಾಗಿಸುವನೆಂದು ಅಥವಾ ವಿಲೆ ಮಾಡುವನೆಂದು ಹೆದರಿಸುತ್ತಾನೆ ಎಂದು ಅಥವಾ ಅಂಥ ಉದ್ದೇಶವನ್ನು ಹೊಂದಿದ್ದಾನೆ ಎಂದು:

ಸಿ) ದಾವೆಯಲ್ಲಿ ವಿವಾದದಲ್ಲಿರುವ ಯಾವುದೇ ಸ್ವತ್ತಿನ ಸಂಬಂಧದಲ್ಲಿ ಅದನ್ನು ವಾದಿಯ ಸ್ವಾಧೀನದಿಂದ ತಪ್ಪಿಸುವುದಾಗಿ ಅಥವಾ ಅನ್ಯಥಾ ಆ ಬಗ್ಗೆ ವಾದಿಗೆ ಕ್ಷತಿಯುಂಟು ಮಾಡುವುದಾಗಿ ಪ್ರತಿವಾದಿಯ ವಾದಿಯನ್ನು ಹೆದರಿಸುತ್ತಾನೆ ಎಂದು: ರುಜುವಾತಾದರೆ ದಾವೆಯ ವಿಲೆಯಾಗುವವರೆಗೆ ಅಥವಾ ಮುಂದಿನ ಆದೇಶದವರೆಗೆ ಅಂಥ ಕೃತ್ಯವನ್ನು ನಿಗ್ರಹಿಸಲು ನ್ಯಾಯಾಲಯವು ಆದೇಶದ ಮೂಲಕ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಾಡಬಹುದು, ಅಥವಾ, ಆ ಸ್ವತ್ತು ಪೋಲಾಗುವುದನ್ನು, ಹಾನಿಗೊಳಗಾಗುವುದನ್ನು, ಪರಭಾರೆಯಾಗುವುದನ್ನು, ಮಾರಾಟ-ವಾಗುವುದನ್ನು, ಸಾಗಿಸಲ್ಪಡವುದನ್ನು ಅಥವಾ ವಿಲೆಯಾಗುವುದನ್ನು ಅಥವಾ ದಾವೆಯಲ್ಲಿ ವಾದದಲ್ಲಿರುವ ಸ್ವತ್ತನ್ನು ವಾದಿಯ ಸ್ವಾಧೀನದಿಂದ ತಪ್ಪಿಸುವುದನ್ನು ಅಥವಾ ಆ ಬಗ್ಗೆ ವಾದಿಗೆ ಕ್ಷತಿಯುಂಟು ಮಾಡುವುದನ್ನು ತಡೆಯುವ ಮತ್ತು ಪ್ರತಿಬಂಧಿಸುವ ಉದ್ದೇಶಕ್ಕಾಗಿ ತಾನು ಸೂಕ್ತವೆಂದು ಆಲೋಚಿಸುವಂಥ ಇತರ ಆದೇಶವನ್ನು ನ್ಯಾಯಾಲಯವು ಮಾಡಬಹುದು.

೧೧. ಈ ನಿಯಮದ ಮೇರೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಕೊಡಬೇಕಾದರೇ ದಾವಾ ಸ್ವತ್ತನ್ನು ಯಾವುದೇ ಪಕ್ಷಗಾರರನ್ನು ಹಾಳು ಮಾಡಿದಲ್ಲಿ ಮತ್ತು ಹಾನಿಯನ್ನುಂಟು ಮಾಡಿದಲ್ಲಿ ಮತ್ತು ಪರಬಾರೆ ಮಾಡಬಹುದು ಎಂದು ನ್ಯಾಯಾಲಯಕ್ಕೆ ಕಂಡುಬಂದರೆ ಇದರಿಂದಾಗಿ ತುಂಬಲಾರದ ನಷ್ಟ ಪಕ್ಷಗಾರರಿಗೆ ಉಂಟಾದರೆ ಮಾತ್ರ ಆದೇಶವನ್ನು ಮಾಡಬಹುದಾಗಿದೆ ಹಾಗೂ ದಾವಾ ಸ್ವತ್ತಿನ ಬಗ್ಗೆ ವಿವಾದಿಸುತ್ತಿರುವ ಪಕ್ಷಗಾರರು ತಮ್ಮ ಹಕ್ಕುಗಳನ್ನು ನಿರ್ಣಯಿಸುವವರೆಗೆ ದಾವಾ ಸ್ವತ್ತಿನ ಸ್ಥಿತಿಗತಿಗಳನ್ನು ದಾವಾ ಹೂಡುವಾಗ ಇದ್ದ ಸ್ಥಿತಿಯಲ್ಲಿ ಇರಿಸಿಕೊಂಡು ಹೋಗಬೇಕೆಂಬುದನ್ನು ತಾತ್ಕಾಲಿಕ ನಿರ್ಭಂದಕಾಜ್ಞೆ ಮಾಡಲು ಇರುವ ಇನ್ನೊಂದು ಉದ್ದೇಶವಾಗಿರುತ್ತದೆ.

೧೨. ಅರ್ಜಿಯಲ್ಲಿನ ಆಸ್ತಿಗಳಿಗೂ ದಾವಾ ಆಸ್ತಿಗಳಿಗೂ ಯಾವ ರೀತಿಯಾಗಿ ಸಂಬಂಧ ಇದೆ ಎಂದು ತೋರಿಸಲು ವಾದಿಯು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಆ ಆಸ್ತಿಯಲ್ಲಿ ಪಕ್ಷಗಾರರಿಗೆ ಹಕ್ಕು ಇದೆಯೇ ಇಲ್ಲವೊ ಎಂದು ತೀರ್ಮಾನಿಸುವಂತಹ ಅವಶ್ಯಕತೆ ಕೂಡ ಈ ನ್ಯಾಯಾಲಯಕ್ಕೆ ಇದ್ದಿರುವುದಿಲ್ಲ ಯಾಕೆಂದರೆ ಆ ಆಸ್ತಿಗಳು ದಾವಾ ಆಸ್ತಿಗಳಾಗಿರುವುದಿಲ್ಲ. ಒಂದು ವೇಳೆ ಆ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದಲ್ಲಿ ಕುಟುಂಬದ ಎಲ್ಲಾ ಸದಸ್ಯರಿಗೂ ಕೂಡ ಆ ಆಸ್ತಿಯಲ್ಲಿ ಹಕ್ಕಿರುತ್ತದೆ. ವಾದಿಯು ಹಾಜರುಪಡಿಸಿರುವ ಫೋಟೋವನ್ನು ಗಮನಿಸಿದಾಗೆ ಅರ್ಧದಷ್ಟು ಮನೆ ನಿರ್ಮಾಣ ಮಾಡಿರುವುದು ಕಂಡುಬರುತ್ತದೆ. ಪ್ರತಿವಾದಿಯವರ ಪ್ರಕಾರ ಅವರಿಗೆ ಮನೆ ಕಟ್ಟಲು ಸರ್ಕಾರದಿಂದ ಹಣವನ್ನು ಮಂಜೂರು ಮಾಡಿದ್ದು ಆ ಹಣದಿಂದ ಅವರು ಮನೆಯನ್ನು ಕಟ್ಟುತ್ತಿದ್ದಾರೆ ಎಂಬುದಾಗಿರುತ್ತದೆ. ಈ ದಾವೆಯನ್ನು ವಾದಿಯು ಪಾಲು ಕೇಳಿ ಸಲ್ಲಿಸಿರುತ್ತಾರೆ. ಒಂದು ವೇಳೆ ಮನೆ

ಕಟ್ಟದಂತೆ ಆದೇಶ ಮಾಡಿದಲ್ಲಿ ಖಂಡಿತವಾಗಿಯೂ ಪ್ರತಿವಾದಿಯವರಿಗೆ ತೊಂದರೆ ಆಗುವ ಸಾಧ್ಯತೆ ಇರುತ್ತದೆ ಹಾಗೂ ಅನಾನುಕೂಲತೆಯ ಒಲವು ಪ್ರತಿವಾದಿ ಪರ ಇರುತ್ತದೆ. ಮೇಲೆ ಹೇಳಿದ ಕಾರಣಗಳಿಂದ ಅಂಶ ೧ ರಿಂದ ೩ ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

೧೪. ಅಂಶ ೪: ಅಂಶ ೧ ರಿಂದ ೩ರಲ್ಲಿನ ಅಂಶಗಳಿಗೆ ನೀಡಿದ ಕಾರಣಗಳಿಗಾಗಿ ಅಂಶ ೪ಕ್ಕೆ ಈ ರೀತಿ ಆದೇಶಿಸಲಾಗಿದೆ.

## :: ಆದೇಶ ::

ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ ೩೯ ನಿಯಮ ೧ ಮತ್ತು ೨ ರಡಿಯಲ್ಲಿ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ೧ಅ ನ್ನು ೧೦೦/- ರೂಪಾಯಿಗಳ ಖರ್ಚಿನೊಂದಿಗೆ ವಜಾಗೊಳಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ೨೭ ನೇ ಸೆಪ್ಟಂಬರ್ - ೨೦೨೧ ರಂದು ಉದ್ಘೋಷಿಸಲಾಯಿತು)

(ಶ್ರೀಮತಿ ಸುಜಾತಾ ಸುವರ್ಣಾ ಬಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಕಡೂರು